# ಶ್ರೀರಾಮಕೃಷ್ಣ ವಚನವೇದದಿಂದ



## ತ್ರಿಗುಣಾತೀತ

**ಯಾ**ವಾಗ ಭಗವಂತ ಸೃಷ್ಟಿ-ಸ್ಥಿತಿ-ಪ್ರಳಯ ಕಾರ್ಯಗಳನ್ನು ಮಾಡುತ್ತಾನೋ ಆಗ ಆತನಿಗೆ ಸಗುಣ ಬ್ರಹ್ಮ ಅಥವಾ ಆದ್ಯಾಶಕ್ತಿ ಅಂತ ಹೆಸರು. ಯಾವಾಗ ಆತನನ್ನು ತ್ರಿಗುಣಾತೀತ ಎಂಬುದಾಗಿ ಭಾವಿಸುತ್ತೇವೆಯೋ, ಆಗ ಆತನಿಗೆ ವಾಙ್ಮನಾತೀತ ನಿರ್ಗುಣ ಬ್ರಹ್ಮ ಅಂತ ಹೆಸರು—ಪರಬ್ರಹ್ಮ ಅಂತ ಹೆಸರು.

ಮನುಷ್ಯ ಭಗವಂತನ ಮಾಯಾಬಲೆಗೆ ಸಿಕ್ಕಿ ತನ್ನ ಸ್ವರೂಪವನ್ನು ಮರೆತು ಬಿಡುತ್ತಾನೆ. ತಂದೆಯ ಅನಂತ ಐಶ್ವರ್ಯಕ್ಕೆ ತಾನು ಉತ್ತರಾಧಿಕಾರಿ ಎಂಬುದನ್ನು ಮರೆತು ಬಿಡುತ್ತಾನೆ. ಆತನ ಮಾಯೆ ತ್ರಿಗುಣಮಯವಾದ್ದು. ಈ ಮೂರು ಗುಣಗಳೂ ದರೋಡೆಕೋರರೇ; ಸರ್ವಸ್ವವನ್ನೂ ಹರಣಮಾಡಿಬಿಡುತ್ತಾರೆ, ಸ್ವರೂಪವನ್ನು ಮರೆಸಿಬಿಡುತ್ತಾರೆ. ಈ ಮೂರು ಗುಣಗಳಾವುವೆಂದರೆ ಸತ್ತ್ವ, ರಜಸ್ಸು, ತಮಸ್ಸು—ಇವುಗಳಲ್ಲಿ ಕೇವಲ ಸತ್ತ್ವಗುಣ ಮಾತ್ರವೇ ಭಗವಂತನ ಕಡೆಗೆ ಹೋಗುವ ಮಾರ್ಗವನ್ನು ತೋರಿಸಿಕೊಟ್ಟು ಬಿಡುತ್ತದೆ. ಆದರೆ ಸತ್ತ್ವಗುಣವೂ ಮನುಷ್ಯನನ್ನು ಭಗವಂತನ ಸಮೀಪಕ್ಕೆ ಕರೆದುಕೊಂಡುಹೋಗಿಬಿಡಲಾರದು.

ಒಂದು ಕಥೆ ಹೇಳುತ್ತೇನೆ ಕೇಳಿ. ಒಬ್ಬ ಧನಿಕ ಕಾಡಿನ ಮಾರ್ಗವಾಗಿ ಹೋಗುತ್ತಿದ್ದ. ಇದ್ದಕ್ಕಿದ್ದ ಹಾಗೆ ಮೂವರು ಡಕಾಯಿತರು ಆತನನ್ನು ಸುತ್ತುಗಟ್ಟಿ ಆತನ ಸರ್ವಸ್ವವನ್ನೂ ಕಸಿದುಕೊಂಡುಬಿಟ್ಟರು. ಆತನ ಹತ್ತಿರ ಇದ್ದುಬದ್ದುದನ್ನೆಲ್ಲ ಕಿತ್ತುಕೊಂಡ ನಂತರ ಒಬ್ಬ ಡಕಾಯಿತ ಹೇಳಿದ: "ಇವನನ್ನೇಕೆ ಹಾಗೇ ಬಿಟ್ಟುಹೋಗಬೇಕು? ಸಾಯಿಸಿಬಿಡೋಣ." ಹೀಗೆಂದು ಹೇಳಿ ಆತನನ್ನು ಕತ್ತರಿಸಿಹಾಕಲು ಮುಂದುವರಿದ. ಎರಡನೇ ಡಕಾಯಿತ ಆತನನ್ನು ತಡೆದು ಹೇಳಿದ: "ಇವನನ್ನೇಕೆ ಕೊಂದುಹಾಕಬೇಕು? ಪಾಪ, ಇವನ ಕೈಕಾಲು ಕಟ್ಟಿ ಇಲ್ಲೇ ಬಿಟ್ಟು ಹೋಗೋಣ. ಆಗ ಆತ ಪೋಲಿಸಿನವನಿಗೆ ಹೇಳಲಾರ." ಹೀಗೆಂದು ಅವರು ಹಗ್ಗದಿಂದ ಧನಿಕನ ಕೈಕಾಲು ಕಟ್ಟಿ ಆತನನ್ನು ಅಲ್ಲೇ ಬಿಟ್ಟು ಹೊರಟು ಹೋದರು. ಸ್ವಲ್ಪ ಹೊತ್ತಾದ ನಂತರ ಮೂರನೆ ಡಕಾಯಿತ ಧನಿಕನಿದ್ದಲ್ಲಿಗೆ ಹಿಂದಿರುಗಿ ಬಂದು ಹೇಳಿದ: "ಅಯ್ಯೋ ಪಾಪ! ನಿನಗೆ ಬಹಳ ಕಷ್ಟವಾಗಿರಬೇಕು, ಅಲ್ಲವೆ? ನಾನು ನಿನ್ನ ಕೈಕಾಲು ಕಟ್ಟುಗಳನ್ನು ಬಿಚ್ಚಿ ಹಾಕುತ್ತೇನೆ." ಹಗ್ಗವನ್ನು ಬಿಚ್ಚಿಹಾಕಿದ ನಂತರ ಡಕಾಯಿತ ಧನಿಕನನ್ನು ಕಾಡಿನಿಂದ ಹೊರಕ್ಕೆ ಕರೆದುಕೊಂಡು ಬಂದ. ಬಳಿಕ ಹೆದ್ದಾರಿಯನ್ನು ಸಮೀಪಿಸಿ, ಆ ಡಕಾಯಿತ ಧನಿಕನಿಗೆ ಹೇಳಿದ: "ಈ ಮಾರ್ಗವಾಗಿಯೇ ನೀನು ಮುಂದುವರಿ, ಯಾವ ತೊಂದರೆಯೂ ಇಲ್ಲದೆ ನಿನ್ನ ಮನೆಯನ್ನು ತಲುಪುತ್ತೀಯೆ." ಧನಿಕ ಹೇಳಿದ: "ಆದರೆ ನೀನೂ ನನ್ನೊಡನೆ ಬರಲೇಬೇಕು. ನೀನು ನನಗೆ ಎಷ್ಟು ಉಪಕಾರವನ್ನು ಮಾಡಿದ್ದೀಯೆ ಏನು ಕತೆ! ನೀನು ನಮ್ಮ ಮನೆಗೆ ಬಂದದ್ದೇ ಆದರೆ ನಮಗೆಲ್ಲ ಬಹಳ ಆನಂದವಾಗಿ ಬಿಡುತ್ತದೆ." ಡಕಾಯಿತ ಹೇಳಿದ: "ಇಲ್ಲ, ನಾನು ಅಲ್ಲಿ ಬರುವ ಹಾಗಿಲ್ಲ. ಪೋಲೀಸಿನವರು ಹಿಡಿದುಕೊಂಡುಬಿಡುತ್ತಾರೆ." ಆತ ಹೀಗೆಂದು ಹೇಳಿ ಧನಿಕನಿಗೆ ದಾರಿ ತೋರಿಸಿಬಿಟ್ಟು ಹೊರಟುಹೋದ.

"ಇವನನ್ನೇಕೆ ಹಾಗೇ ಬಿಟ್ಟುಬಿಡಬೇಕು? ಸಾಯಿಸಿಬಿಡೋಣ" ಎಂಬುದಾಗಿ ಹೇಳಿದ ಮೊದಲನೆ ಡಕಾಯಿತ ತಮಸ್ಸಿನ ಉಪಮೆ. ತಮಸ್ಸು ನಾಶಮಾಡುವುದು. ಎರಡನೆಯ ಡಕಾಯಿತ ರಜೋಗುಣಕ್ಕೆ ಉಪಮೆ. ರಜಸ್ಸು ಮನುಷ್ಯನನ್ನು ಸಂಸಾರಬಂಧನಕ್ಕೆ ಸಿಲುಕಿಸಿ ವಿವಿಧ ಕಾರ್ಯಗಳಲ್ಲಿ ಆತನನ್ನು ತೊಡಗಿಸುತ್ತದೆ; ಭಗವಂತನನ್ನು ಮರೆಯುವಂತೆ ಮಾಡುತ್ತದೆ. ಕೇವಲ ಸತ್ತ್ವಗುಣ ಮಾತ್ರವೇ ಭಗವಂತನ ಕಡೆಗೆ ಹೋಗುವ ಮಾರ್ಗವನ್ನು ತೋರಿಸಿಕೊಡುತ್ತದೆ. ದಯೆ, ಧರ್ಮ, ಭಕ್ತಿ ಇವೆಲ್ಲ ಸತ್ತ್ವಗುಣದಿಂದ ಉಂಟಾಗುತ್ತವೆ. ಸತ್ತ್ವಗುಣ ಮೆಟ್ಟಿಲ ಸಾಲ ತುತ್ತತುದಿ ಮೆಟ್ಟಿಲು ಇದ್ದಹಾಗೆ. ಅದನ್ನು ಹತ್ತಿದೊಡನೆಯೇ ಚಾವಣಿ. ಮನುಷ್ಯನ ಸ್ವಭಾವವೇ ಪರಬ್ರಹ್ಮ. ಮನುಷ್ಯ ತ್ರಿಗುಣಾತೀತನಾಗದ ಹೊರತು ಆತನಿಗೆ ಬ್ರಹ್ಮ ಜ್ಞಾನ ದೊರಕದು.

ಭಗವಂತನ ಸಾಕ್ಷಾತ್ಕಾರ ಪಡೆದನಂತರ, ಸಮಾಧಿಯಲ್ಲಿ ಆತನೊಡನೆ ಐಕ್ಯವಾದನಂತರ ಜ್ಞಾನ, ವಿಚಾರ ಎಲ್ಲ ನಿಂತುಹೋಗಿಬಿಡುತ್ತದೆ. ಜ್ಞಾನ, ವಿಚಾರ ಎಲ್ಲಿಯವರೆಗೆ ಇರುತ್ತದೆ? ಬಹುತ್ವದ ಜ್ಞಾನವಿರುವವರೆಗೆ—ಜೀವ, ಜಗತ್ತು, ನಾನು, ನೀನು ಇವೆ ಮೊದಲಾದವುಗಳ ಬೋಧೆ ಇರುವವರೆಗೆ —ಯಾವಾಗ ಸರಿಯಾಗಿ ಏಕತೆಯ ಜ್ಞಾನ ದೊರೆಯುವುದೂ ಆಗ ಸಾಧಕ ಶಾಂತನಾಗಿಬಿಡುತ್ತಾನೆ.